ಪ್ಲಾಂಟೇಶನ್ (ತಿದ್ದುಪಡಿ) ಕಾಯಿದೆ ೧೯೫೨ರ ಅನ್ವಯ ನಿಯಮಗಳನ್ನು ಹೊರಡಿಸುವ ಬಗ್ಗೆ

೬೮ (೨೬೪) ಶ್ರೀ ಟಿ. ಎಸ್. ಮಣಿ.—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ :—

ಪ್ಲಾಂಟೇಶನ್ ಕಾಯಿದೆ ೧೯೫೨ರ ಅಡಿಯಲ್ಲಿ ನಿಯಮಗಳನ್ನು ರಚಿಸಿ ಪ್ರಕಟಿಸದೆ ಇರುವುದಕ್ಕೆ ಕಾರಣಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಿ ಸದರಿ ನಿಯಮಗಳನ್ನು ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ನಾನು ಈಗಾಗಲೇ ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಇನ್ನೂ ಒಂದು ಹೆಚ್ಚಿನ ಮುಂದೆ ಹೋಗಿ ಹೇಳುವುದಾದರೆ ೧೯೬೧ನೇ ಇಸವಿಯ ಪ್ಲಾಂಟೇಷನ್ ಕಾಯಿದೆ ಪ್ರಕಾರ ಕೇಂದ್ರ ಸರ್ಕಾರ ದವರು ಕೆಲವು ವಿವರಗಳನ್ನು ಕೇಳಿದ್ದಾರೆ. ಆ ಬಗ್ಗೆ ವಿವರಗಳನ್ನು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಈಗಾಗಲೇ ಅವರ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನೂ ಸಹ ಪಡೆದಿದ್ದೇನೆ. ಇನ್ನು ಎರಡು ವಾರದೊಳಗಾಗಿ ಅದನ್ನು ಪಬ್ಲಿಷ್ ಮಾಡುತ್ತೇವೆ. ಇದನ್ನೇನಾದರೂ ಪಬ್ಲಿಷ್ ಮಾಡುವುದಕ್ಕೆ ಅವರಿಂದ ಒತ್ತಾಯ ಏನಾದರೂ ಇದೆಯೇ ?

ಶ್ರೀ ಆರ್. ವೆಂಕಟರಾಮಯ್ಯ (ಶ್ರೀ ಟಿ. ಎಸ್. ಮಣಿ ಅವರ ಪರವಾಗಿ).—ಎರಡು ವಾರ ಅಲ್ಲ ಒಂದು ತಿಂಗಳು ಆಗಲಿ. ಈಗ ಇದನ್ನು ಹಿಂದಕ್ಕೆ ಪಡೆದು ೬ ವರ್ಷವಾಯಿತು. ೬ ವರ್ಷ ದಿಂದಲೂ ತಳ್ಳುತ್ತಾ ಇದ್ದೀರಿ. ಇದರಲ್ಲಿ ಒಂದು ವಿಷಯ ಏನೆಂದರೆ ಈ ಪ್ಲಾಂಟೇಷನ್ ಯಜಮಾನರು ಒತ್ತಾಯ ಮಾಡಿ, ಅವರು ತಮ್ಮ ಸ್ವಂತ ಲಾಭ ಮಾಡಿಕೊಳ್ಳುವುದಕ್ಕಾಗಿ ಇದು ನಡೆಯದಂತೆ ಮಾಡುತ್ತಾ ಇದ್ದಾರೆ. ಆದುದರಿಂದ ಇದನ್ನು ಎರಡು ವಾರದೊಳಗೆ ಪಬ್ಲಿಷ್ ಮಾಡುತ್ತೀರಾ ಇಲ್ಲವೇ ಸುಮ್ಮನೆ ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಮ್ಮನೆ ಹೇಳುವುದಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಬೇಕಾಗಿತ್ತು. ಅವರು ನಮ್ಮನ್ನು ಕೆಲವು ವಿವರ ಗಳನ್ನು ಕೇಳಿದ್ದರು. ಈಗ ಆ ವಿವರಗಳನ್ನು ಕಳುಹಿಸಿ ಅವರ ಒಪ್ಪಿಗೆಯನ್ನು ಪಡೆಯಲಾಗಿದೆ. ಇನ್ನು ಎರಡು ವಾರದೊಳಗೆ ಪಬ್ಲಿಷ್ ಮಾಡುತ್ತೇವೆ. ಇದಕ್ಕೆ ಯಾರ ಒತ್ತಾಯವೂ ಇಲ್ಲ, ಏನೂ ಇಲ್ಲ.

ಅಧ್ಯಕ್ಷರು.—ಪ್ರಶ್ನೆ ೬೯(೪೭೭) ಶ್ರೀ ಜಿ. ರಾಮದಾಸ್ ಅವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಪ್ರಶ್ನೆ ೭೦ (೧೦) ಶ್ರೀ ಬಾಬುರೆಡ್ಡಿ ವಿ. ತುಂಗಲ್—ಸದಸ್ಯರು ಹಾಜರಿಲ್ಲ.

ಪ್ರಶ್ನೆ ೭೧ (೨೫೭) ಶ್ರೀ ಮದನಗೋಪಾಲ ನಾಯ್ಕ—ಸದಸ್ಯರು ಹಾಜರಿಲ್ಲ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಅಧ್ಯಕ್ಷರೇ, ನನ್ನ ಪ್ರಶ್ನೆ ಬಿಟ್ಟುಹೋಗಿದೆ.

ಅಧ್ಯಕ್ಷರು.—ತರಿಸಿಕೊಡುತ್ತೇನೆ. ಮುಂದಿನ ಪ್ರಶ್ನೆ ಕೇಳಿ.

ದಕ್ಷಿಣ ಕನ್ನಡದಲ್ಲಿ ಬೀಡಿ ವ್ಯವಸಾಯ

೭೨ (೧೯೩) ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣಕನ್ನಡ ಜಿಲ್ಲೆಯಲ್ಲಿ ೧೯೬೫-೬೬ರಲ್ಲಿ ಒಟ್ಟು ಬೀಡಿ ಮಾಲೀಕರು, ಬೀಡಿ ಕಂಟ್ರಾಕ್ಟರರು ಹಾಗೂ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರಿಗೆ ಈಗ ನಿಗದಿಪಡಿಸಿರುವ ಕೂಲಿ ಎಷ್ಟು ?

ಇ) ಈ ಮಜೂರಿಯನ್ನು ಕೇರಳದ ಮಟ್ಟಕ್ಕೆ ತರಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸು.೭೬೦ ಬೀಡಿ ಮಾಲೀಕರು ಹಾಗೂ ಸುಮಾರು ೧,೮೦,೦೦೦ ಬೀಡಿ ಕಾರ್ಮಿಕರು ಇದ್ದಾರೆ. ಬೀಡಿ ಕಾಂಟ್ರಾಕ್ಟರುಗಳ ಬಗ್ಗೆ ಅಧಿಕೃತವಾದ ಮಾಹಿತಿ ಲಭ್ಯವಿಲ್ಲ.

ಆ) ಕರ್ನಾಟಕ ರಾಜ್ಯಾದ್ಯಂತ ತಂಬಾಕು (ಬೀಡಿ ಕಟ್ಟುವುದು ಸೇರಿ) ಉದ್ದಿಮೆಗೆ ಕನಿಷ್ಟ ವೇತನ ಪುನರ್ ವಿಮರ್ಶಿಸಿ, ೨೫-೭-೮೬ರಂದು ಆದೇಶ ಹೊರಡಿಸಿದೆ, ಇದರ ಪ್ರಕಾರ ೧,೦೦೦ ಬೀಡಿ ಸುತ್ತಲು ರೂ. ೧೧-೫೦ನ್ನು ಕನಿಷ್ಟ ವೇತನವಾಗಿ ನಿಗದಿಪಡಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧,೦೦೦ ಬೀಡಿ ಸುತ್ತಲು ರೂ. ೧೨-೨೮ರ ವೇತನ ಕೊಡಬೇಕೆಂದು ಒಪ್ಪಂದ ಆಗಿದೆ.

ಇ) ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ತಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧,೮೦,೦೦೦ ಬೀಡಿ ಕಾರ್ಮಿಕರು ಇದ್ದಾರೆ ಎಂದು ಹೇಳಿದ್ದೀರಿ. ಅವರೆಲ್ಲ ಬಡವರೇ ಇದ್ದಾರೆ, ಅವರು ತಮ್ಮ ಜೀವನ ಪೂರೈಸಿಕೊಂಡು ಹೋಗುವುದು ಕಷ್ಟ. ಇದರಲ್ಲಿ ಒಂದು ಸಾವಿರ ಬೀಡಿ ಸುತ್ತಲು ರೂಪಾಯಿ ೧೧-೫೦ನ್ನು ಕನಿಷ್ಟ ವೇತನವಾಗಿ ನಿಗದಿ ಪಡಿಸಿದೆ ಎಂದು ತಿಳಿಸಿದ್ದೀರಿ. ಇದು ಬಹಳ ಕಡಿಮೆಯೆಂದು ನನಗೆ ಕಾಣುತ್ತದೆ. ಏತಕ್ಕೆಂದರೆ ಅಲ್ಲಿಯ ಮಾಲೀಕರು ಅನೇಕ ರೀತಿಯಲ್ಲಿ ಬೀಡಿ ಕಾರ್ಮಿಕರಿಗೆ ಕಿರುಕುಳ ಕೊಡುತ್ತಿದ್ದಾರೆ, ಇವರಿಗೆ ಬೋನಸ್ ಕೊಡುವುದನ್ನು ತಪ್ಪಿಸುವ ಹಾಗೆ ಕಿರುಕುಳ ಕೊಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಸರಿಯಾಗಿ ತನಿಖೆ ಮಾಡಿ ಅವರಿಗೆ ಬೋನಸ್ ಸರಿಯಾಗಿ ಪಾವತಿಯಾಗುವ ಹಾಗೆ ಮಾಡುತ್ತೀರಾ ? ಅಲ್ಲಿಯ ಬೀಡಿ ಕಾರ್ಮಿಕರಿಗೆ ಆ ಮಾಲೀಕರು ಸರಿಯಾದ ಸೌಲಭ್ಯವನ್ನು ಕೊಟ್ಟಿಲ್ಲ. ಇದರ ಬಗ್ಗೆ ತಾವೇನಾದರೂ ಆಲೋಚನೆ ಮಾಡಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೇ, ಈ ಬೋನಸ್ ವಿಚಾರದ ಬಗ್ಗೆ ಮಾನ್ಯ ಸದಸ್ಯರಿಗೆ ಕೆಲವು ವಿವರಗಳನ್ನು ಕೊಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ಈ ಉದ್ದಿಮೆಯ ಹಿತದೃಷ್ಟಿಯಿಂದ ಮತ್ತು ಅಲ್ಲಿಯ ಕಾರ್ಮಿಕರ ಹಿತದೃಷ್ಟಿಯಿಂದ ನಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದು ಹೇಳುವುದು ಒಳ್ಳೆಯದು. ಈಗ ತಮಿಳುನಾಡಿನಲ್ಲಿ ಒಂದು ಸಾವಿರ ಬೀಡಿಗೆ, ೮ ರೂಪಾಯಿ ಕೊಡುತ್ತಿದ್ದಾರೆ, ಸಾದಾ ಬೀಡಿಗೆ ೭.೮೦ ಪೈಸೆ ಕೊಡುತ್ತಿದ್ದಾರೆ. ಕೇರಳದಲ್ಲಿ ೧೨ ರೂಪಾಯಿಗಳನ್ನು ಕೊಡುತ್ತಿದ್ದಾರೆ, ಆಂಧ್ರಪ್ರದೇಶದಲ್ಲಿ ಡಿಎ ೨-೭೦ ಪೈಸೆ ಇದೆ. ಮತ್ತೊಂದು ಜೋನ್‌ನಲ್ಲಿ ೨.೦೪ ಇದೆ. ನಮ್ಮ ಕರ್ನಾಟಕದಲ್ಲಿ ೨.೦೪ ಪೈಸೆ ಇದೆ. ಈ ಬಗ್ಗೆ ಒಂದು ಸೂಚನೆ ಬಂದಮೇಲೆ ಕಾನೂನು ಪ್ರಕಾರ ಇದನ್ನು ಅಡ್ವೈಸರಿ ಕಮಿಟಿ ಮುಂದೆ ಇಟ್ಟು ಒಂದು ನೋಟಿಫಿಕೇಷನ್ ಇಷ್ಯೂ ಮಾಡಿ ಅಬ್ಜಕ್ಷನ್ಸ್ ಕರೆದೆವು. ಈಗ ಒಂದು ನಿರ್ಣಯ ಮಾಡಿದೆ. ಈ ಮೂರು ರಾಜ್ಯಕ್ಕಿಂತಲೂ ನಮ್ಮದು ಕಡಿಮೆ ಇದೆ. ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರ ಈ ಮೂರು ರಾಜ್ಯಕ್ಕಿಂತಲೂ ನಮ್ಮದು ಹೆಚ್ಚು ಇದೆ. ಕೇರಳದ್ದು ಮಾತ್ರ ನಮ್ಮದಕ್ಕಿಂತ ಹೆಚ್ಚಾಗಿದೆ. ಏತಕ್ಕೆಂದರೆ ಅಲ್ಲಿ ಸಹಕಾರ ಸಂಘಗಳ ಸಹಾಯದಿಂದ ಅದನ್ನು ಮಾಡುತ್ತಿದ್ದಾರೆ. ಕೇರಳ ಬಿಟ್ಟರೆ ನಮ್ಮದು ಹೆಚ್ಚು ಇದೆ. ನನ್ನಲ್ಲಿರುವ ಮಾಹಿತಿ ಪ್ರಕಾರ ರಾಷ್ಟ್ರದಲ್ಲೇ ಇಲ್ಲಿ ಹೆಚ್ಚಾಗಿದೆ ಎಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಬಂಗಾಳದಲ್ಲಿ ೧೮ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಗೊತ್ತಿರುವುದನ್ನು ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಇನ್ನೇನಾದರೂ ವಿವರಗಳು ನಿಮ್ಮ ಹತ್ತಿರ ಇದ್ದರೆ ಕೊಡಿ. ನಾನು ಹೇಳಿದ್ದು ಏನೆಂದರೆ ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರಕ್ಕಿಂತ ನಮ್ಮದು ಹೆಚ್ಚಾಗಿದೆ ಎಂದು. ಇದರಲ್ಲಿ ಎರಡು ತರಹ ಇದೆ. ಪಕ್ಕದ ರಾಜ್ಯಕ್ಕಿಂತ ಹೆಚ್ಚಾಗಿದ್ದರೆ ಎಲ್ಲಿ ಹೆಚ್ಚಾಗಿದೆ ಆ ರಾಜ್ಯಕ್ಕೆ ಇವರು ಪಲಸೆ ಹೋಗುತ್ತಾರೆ. ಇದರಿಂದ ಆ ರಾಜ್ಯದ ಉದ್ದಿಮೆ ನಿಂತು ಹೋಗುತ್ತದೆ. ಆದುದರಿಂದ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಂದು ಸಲಹೆ ಕೊಟ್ಟಿದ್ದೇವೆ. ಈ ವಿಚಾರದಲ್ಲಿ ಎಲ್ಲಾ ರಾಜ್ಯ ಸರ್ಕಾರಗಳ ಒಂದು ಸಭೆಯನ್ನು ಕರೆದು ಸಮಾಲೋಚನೆ ಮಾಡಿ ಅಕ್ಕಪಕ್ಕದ ರಾಜ್ಯಗಳಲ್ಲಿ ಒಂದು ರಾಜ್ಯಕ್ಕಿಂತ ಮತ್ತೊಂದು ರಾಜ್ಯಕ್ಕೆ ಹೆಚ್ಚು ಇಲ್ಲದೆ ಒಂದು ಸಮಾನವಾದ ರೀತಿಯಲ್ಲಿ ಇದನ್ನು ಮಾಡಿದರೆ ಈ ಉದ್ದಿಮೆಗೂ ಒಳ್ಳೆಯದಾಗುತ್ತದೆ ಹಾಗೂ ಕಾರ್ಮಿಕರಿಗೂ ಒಳ್ಳೆಯದಾಗುತ್ತದೆ ಎಂದು

ಹೇಳಿದ್ದೇವೆ. ಇದರ ಬಗ್ಗೆ ಚರ್ಚೆ ನಡೆಯುವುದು ಒಳ್ಳೆಯದು. ಈ ವಿಚಾರದಲ್ಲಿ ಲೇಬರ್ ಮಿನಿಸ್ಟರ್‌ದ್ದು ೨-೩ ಮೀಟಿಂಗ್ ಆಗಿದೆ. ಮತ್ತೆ ಮೀಟಿಂಗ್ ನಡೆಯಬೇಕಾಗಿದೆ. ಆಗ ಇದರ ಬಗ್ಗೆ ಏನಾದರೂ ಒಂದು ನಿರ್ಣಯಕ್ಕೆ ಬಂದರೆ ಕಾರ್ಮಿಕರಿಗೆ ಅನುಕೂಲವಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಬೀಡಿ ಮಾಲೀಕರು ಇದರಿಂದ ಲಾಭ ಮಾಡುವಾಗ ಇದರಲ್ಲೇ ಜೀವನ ಮಾಡತಕ್ಕಂಥ ಕಾರ್ಮಿಕರಿಗೆ ಅವರು ಕೊಡತಕ್ಕಂಥಾದ್ದು ಬಹಳ ಕಡಿಮೆ ಎಂದು ಹೇಳುತ್ತೇನೆ. ಅನೇಕ ಮುಗ್ಧರನ್ನು ಅವರ ಕೈಯಲ್ಲಿ ಇಟ್ಟುಕೊಂಡು ಕೆಲಸ ಮಾಡಿಸುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ಕೇರಳದಲ್ಲಿ ೧೫ ರೂಪಾಯಿಗಳಂ ಇರುವಾಗ ಕರ್ನಾಟಕದಲ್ಲಿ ಅತಿ ಕಡಿಮೆ ಇರುವುದು ಸರಿಯಲ್ಲ. ಆದರಂತೆ ಇಲ್ಲೂ ಕೂಡ ಅವರಿಗೆ ಹೆಚ್ಚು ಕೊಟ್ಟರೆ ಸಂತೋಷ. ಕೇರಳದಲ್ಲಿರುವ ಹಾಗೆ ಆ ರೀತಿಯಾಗಿ ಈ ಬೀಡಿ ಕಾರ್ಮಿಕರಿಗೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಒಂದೇ ದೃಷ್ಟಿ, ಇಟ್ಟು ಕೊಂಡು ಕಾನೂನು ಮಾಡುವುದಕ್ಕಾಗುವುದಿಲ್ಲ, ಹುಬ್ಬಳ್ಳಿ, ನಿಪ್ಪಾಣಿ, ಹರಿಹರ, ಕೋಲಾರ ಈ ಭಾಗದಲ್ಲೂ ಇದ್ದಾರೆ. ಅಕ್ಕಪಕ್ಕದ ರಾಜ್ಯಗಳಲ್ಲಿರತಕ್ಕಂಥಾದ್ದನ್ನೂ ಗಮನಿಸಬೇಕು. ತಾವು ಹೇಳಿದ ಹಾಗೆ ಕೇರಳದಲ್ಲಿ ಸಹಕಾರ ಸಂಘಗಳ ಮುಖಾಂತರ ಇದು ನಡೆಯುವುದರಿಂದ ಇಲ್ಲೂ ಕಡೆ ಸಹಕಾರ ಸಂಘಗಳ ಮುಖಾಂತರ ಮಾಡುತ್ತೇವೆಂದು ಈ ಬೀಡಿ ಕಾರ್ಮಿಕರು ಏನಾದರೂ ಮುಂದೆ ಬಂದರೆ ಅವರಿಗೆ ಸರ್ಕಾರಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಬಿ.ಎಂ. ಇದಿನಬ್ಬ.—ಸ್ವಾಮಿ, ಈ ಒಂದು ಉದ್ದಿಮೆಯಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫ ಲಕ್ಷ ಜನ ಬೀಡಿ ಕಾರ್ಮಿಕರು ಜೀವನ ಮಾಡುತ್ತಿದ್ದಾರೆ. ಈ ಮಾಲೀಕರು ಆ ಕಾರ್ಮಿಕರಿಗೆ ಕೊಡುವ ಕೂಲಿ ಕಡಿಮೆ ಇದೆ. ಆ ಮಾಲೀಕರು ಚೆನ್ನಾಗಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೆ ಅವರು ಕೋಟ್ಯಾಂತರ ರೂಪಾಯಿಗಳ ಇನ್‌ಕಂಟ್ಯಾಕ್ಸ್ ಕಟ್ಟುತ್ತಿದ್ದಾರೆ. ಆದುದರಿಂದ ತಾವು ಇದರ ಬಗ್ಗೆ ತತ್‌ಕ್ಷಣ ಜಾಗ್ರತೆ ವಹಿಸಿ ಕೆಲಸ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ನಾನು ಮೊನ್ನೆಯ ದಿವಸ ಮಾನ್ಯ ಮಂಜುನಾಥ್‌ರವರ ಹತ್ತಿರ ಹೋಗಿದ್ದೆ. ಅವರ ಹತ್ತಿರ ಈ ವಿಚಾರದಲ್ಲಿ ಮಾತನಾಡಿದೆ. ಅವರು ಇದಕ್ಕೆ ಒಪ್ಪಿಕೊಂಡಿದ್ದಾರೆ. ತಾವು ಸಹ ಈ ವಿಚಾರದಲ್ಲಿ ಆ ಮಾಲೀಕರನ್ನು ಸ್ವಲ್ಪ ಬಿಗಿಗೊಳಿಸಿದರೆ ಅವರೂ ಮಾಡಬಹುದು. ಇದರಿಂದ ೫ ಲಕ್ಷ ಜನ ಬೀಡಿ ಕಾರ್ಮಿಕರಿಗೆ ಸಹಾಯವಾಗುತ್ತದೆ, ಆ ಬಡವರಿಗೆ ಅನುಕೂಲವಾಗುತ್ತದೆ ? ಹಾಗೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದುದನ್ನು ಪರಿಶೀಲನೆ ಮಾಡುತ್ತೇನೆ. ಅವರನ್ನು ಕರೆಯಿಸುತ್ತೇನೆ.

ಬರಪೀಡಿತ ಪ್ರದೇಶಗಳಿಗಾಗಿ ಮೇವು ಸಂಗ್ರಹಣೆ

೭೩ (೩೬೭) ಶ್ರೀ ಬಿ. ಸ್ವಾಮಿರಾವ್ (ಹೊಸ ನಗರ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಬರಪೀಡಿತ ಪ್ರದೇಶಕ್ಕಾಗಿ ಹೊಸನಗರ ತಾಲ್ಲೂಕಿನಲ್ಲಿ ಸಂಗ್ರಹಿಸಿದ ಮೇವಿನ ಪ್ರಮಾಣವೆಷ್ಟು ?

ಆ) ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

ಇ) ಶೇಖರಿಸಿದ ಮೇವನ್ನು ಎಲ್ಲಿಗೆ ಕಳುಹಿಸಲಾಗಿದೆ ?

ಈ) ಸಂಗ್ರಹಿಸಲು ಪ್ರತ್ಯೇಕ ಹಣ ಮಂಜೂರಾತಿ ಮಾಡಲಾಗಿದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ರಾಜ್ಯದ ಬರಪೀಡಿತ ಪ್ರದೇಶಕ್ಕಾಗಿ ಹೊಸನಗರ ತಾಲ್ಲೂಕಿನಲ್ಲಿ ಒಟ್ಟು ೯೨ ಮೆಟ್ರಿಕ್ ಟನ್‌ಗಳಷ್ಟು ಮೇವನ್ನು ಸಂಗ್ರಹಿಸಲಾಗಿತ್ತು.

ಆ) ಮೇವಿನ ಸಂಗ್ರಹಣೆಗಾಗಿ ಒಟ್ಟು ರೂ. ೧೭,೦೬೮-೫೦ ವೆಚ್ಚ ಮಾಡಲಾಗಿದೆ.

ಇ) ಶೇಖರಿಸಿದ ಮೇವಲ್ಲಿ ಕೋಲಾರ ಜಿಲ್ಲೆಗೆ ೨೬ ಮೆಟ್ರಿಕ್ ಟನ್ ಹಾಗೂ ಪಾವಗಡದ ರಾಮಕೃಷ್ಣಾಶ್ರಮಕ್ಕೆ ೯ ಮೆಟ್ರಿಕ್ ಟನ್ ಕಳುಹಿಸಲಾಗಿದೆ.